# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ

## KARNATAKA STATE FINANCIAL CORPORATION

Established under the State Financial Corporations' Act, 1951


ಸಂಖ್ಯೆ: ಕ.ರಾ.ಹ.ಸಂ./ಪ್ರ.ಕ./ಡಿ-109/2021-22
Ref. No. KSFC/H.O./

ದಿನಾಂಕ:
Date 27/04/2021

**ಸುತ್ತೋಲೆ**

ವಿಷಯ: ಕೊರೋನಾ ವೈರಸ್(ಕೋವಿಡ್-19) ತಡೆಗಟ್ಟುವ ಹಿನ್ನೆಲೆಯಲ್ಲಿ ತುರ್ತು ಸಂದರ್ಭಕ್ಕೆ ಅನುಗುಣವಾಗಿ ಉದ್ಯೋಗಿಗಳು ಕೆಲಸಕ್ಕೆ ಹಾಜರಾಗುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ.ಆರ್‌ಡಿ/ಟಿಎನ್‌ಆರ್/2020 ದಿ:26.04.2021.

2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಸುತ್ತೋಲೆ ಸಂಖ್ಯೆ:ಸಿಆಸುಇ/87/ಡಿಇವಿ/2021 ದಿನಾಂಕ 27.04.2021.

*~*~*

ಕರ್ನಾಟಕ ರಾಜ್ಯದಲ್ಲಿ ಕೊರೋನಾ ವೈರಸ್ (ಕೋವಿಡ್-19) ಸಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸರ್ಕಾರವು ಹಲವು ಕಠಿಣ ನಿಯಮಗಳನ್ನು ಜಾರಿಗೊಳಿಸಿದ್ದು, ಅದರಂತೆ ಅತ್ಯವಶ್ಯಕ ಇಲಾಖೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಇಲಾಖೆ ಸಿಬ್ಬಂದಿ ಹಾಜರಾತಿಗೆ (ನಿಯಮಗಳನ್ನು ಒಳಗೊಂಡಂತೆ) ವಿನಾಯಿತಿ ನೀಡಿರುತ್ತದೆ. ಆದರೆ ಕೆಲವೊಂದು ತುರ್ತು ಸಂದರ್ಭಗಳಲ್ಲಿ ಆಯಾ ಇಲಾಖಾ/ ಶಾಖಾ ಮುಖ್ಯಸ್ಥರು ಬಯಸಿದಂತಹ ಅಧಿಕಾರಿ/ ಸಿಬ್ಬಂದಿ ವರ್ಗದವರು ಯಾವುದೇ ಕಾರಣ ನೀಡದೆ ಕೆಲಸಕ್ಕೆ ಹಾಜರಾಗುವಂತೆ ಸೂಚಿಸಲು ಅವಕಾಶ ಕಲ್ಪಿಸಲಾಗಿದೆ.

ಈ ಪ್ರಕಾರ ಪ್ರಸ್ತುತ ಸಂಸ್ಥೆಯ ವಾರ್ಷಿಕ ಲೆಕ್ಕಪತ್ರ ಹಾಗೂ ವಾರ್ಷಿಕ ವರದಿ ಅಂತಿಮಗೊಳಿಸುವ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿದ್ದು, ಈ ಕೆಲಸ ನಿರ್ವಹಿಸುವ ಸಿಬ್ಬಂದಿ ಹಾಗೂ ಅತೀ ಮುಖ್ಯವಾಗಿ ಕೈಗಾರಿಕೋದ್ಯಮಿಗಳಿಗೆ ಅನಾನುಕೂಲವಾಗದಂತೆ ಸೇವೆ ಸಲ್ಲಿಸಲು ಅವಶ್ಯವಿರುವ ಸಿಬ್ಬಂದಿ ಮಾತ್ರ ಕಛೇರಿ ಕೆಲಸಕ್ಕೆ ಹಾಜರಾಗುವುದು ಅವಶ್ಯವಿರುತ್ತದೆ. ಈ ಬಗ್ಗೆ ಆಯಾ ವಿಭಾಗ/ ಶಾಖಾ ಮುಖ್ಯಸ್ಥರುಗಳು ತೀರ್ಮಾನಿಸಿ ಅಯಾ ವಿಭಾಗ/ ಶಾಖಾ ಮಟ್ಟದಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ಇದಲ್ಲದೆ ಸಂಸ್ಥೆಯ ಯಾವುದೇ ವೃಂದದ ಉದ್ಯೋಗಿಗಳು ಮೊಬೈಲ್ ಸಂಪರ್ಕಕ್ಕೆ ಸಿಗುವಂತೆ, ಕೇಂದ್ರ ಸ್ಥಾನದಲ್ಲೇ ಇರಲು ಮತ್ತು ಅವಶ್ಯವಿದ್ದಲ್ಲಿ, ವಿಭಾಗದ ಮುಖ್ಯಸ್ಥರುಗಳು ಮತ್ತು ಶಾಖಾ ವ್ಯವಸ್ಥಾಪಕರು ಅಂತಹ ಉದ್ಯೋಗಿಗಳ ಸೇವೆಯನ್ನು ಸಂದರ್ಭಾನುಸಾರ ಮತ್ತು ಅವಶ್ಯಕತೆಗೆ ಅನುಗುಣವಾಗಿ ಪಡೆಯಬಹುದಾಗಿರುತ್ತದೆ. ಅಂತಹ ಉದ್ಯೋಗಿಗಳು ಸಂಸ್ಥೆಯ ಗುರುತಿನ ಚೀಟಿಯನ್ನು ಸಂಬಂಧಪಟ್ಟವರಿಗೆ ತೋರಿಸಿ ಸೂಚಿಸಿರುವ ಕೆಲಸ ಕಾರ್ಯಗಳಿಗೆ ಕಡ್ಡಾಯವಾಗಿ ಹಾಜರಾಗಬೇಕಾಗಿರುತ್ತದೆ.

ಈ ಸುತ್ತೋಲೆಯು ದಿನಾಂಕ 28.04.2021 ರಿಂದ ದಿನಾಂಕ 11.05.2021 ರವರಗೆ ಜಾರಿಯಲ್ಲಿರುತ್ತದೆ. ಸಂಸ್ಥೆಯ ಎಲ್ಲಾ ಕಛೇರಿಗಳು ಮೇಲ್ಕಂಡಂತೆ ಕಾರ್ಯನಿರ್ವಹಿಸಲು ಈ ಮೂಲಕ ಆದೇಶ ಹೊರಡಿಸಲಾಗಿದೆ.

Ellmsap Cam

**ವ್ಯವಸ್ಥಾಪಕ ನಿರ್ದೇಶಕರು**

ಎಲ್ಲಾ ಶಾಖಾ ಕಛೇರಿಗಳು /ಆಲೆಪ ಕೋಶಗಳಿಗೆ
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು-1 ಮತ್ತು 2
ಗ್ರಂಥಾಲಯ / ಸೂಚನಾ ಫಲಕಕ್ಕೆ